ಸಮಾಜಕ್ಕೆ ಜೀವಪರ ಮಾರ್ಗ ತೋರುವವರನ್ನು ‘ದೀಪಧಾರಿ’ಗಳು ಎನ್ನುತ್ತೇವೆ. ಆದರೆ, ರೋಗಿಗಳ ಸೇವೆಯಲ್ಲಿ ತೊಡಗಿರುವ ದಾದಿಯರು ತಾವೇ ದೀಪದಂತೆ ಕಾಣಿಸುತ್ತಾರೆ. ಹುಟ್ಟು-ಸಾವಿನ ಗಳಿಗೆಗಳಿಗೆ ಸಾಕ್ಷಿಯಾಗಿ, ಅಳು-ನಗುಗಳ ಲೋಕದಲ್ಲಿ ನಿರಂತರವಾಗಿ ಭಾಗಿಯಾಗುವ ದಾದಿಯರು ಮಾನವೀಯತೆಯ ನಿಜ ರಾಯಭಾರಿಗಳೂ ಹೌದು. ಸಮಾಜದ ಗೌರವ ಮತ್ತು ಕೃತಜ್ಞತೆಗೆ ಪಾತ್ರವಾಗಬೇಕಾದ ‘ನರ್ಸಿಂಗ್’ ವೃತ್ತಿ, ವೈದ್ಯರ ಪ್ರಭಾವಳಿಯಲ್ಲಿ ಎಲೆಮರೆಯ ಕಾಯಿಯಾಗಿ ಉಳಿದಿರುವುದೇ ಹೆಚ್ಚು. ಸೇವೆಯ ಪ್ರಭಾವಳಿಯಲ್ಲಿ ಅವರ ಬದುಕಿನ ತವಕತಲ್ಲಣಗಳು ಹಿನ್ನೆಲೆಗೆ ಸರಿದಿರುವುದೂ ಇದೆ. ಮೂವರು ಸಂವೇದನಾಶೀಲ ‘ನರ್ಸ್’ಗಳ ವೃತ್ತಿಯ ಅನುಭವಗಳ ಇಲ್ಲಿನ ಲೇಖನಗಳು, ನರ್ಸಿಂಗ್ ವೃತ್ತಿಯ ಉದಾತ್ತತೆಯ ಜೊತೆಗೆ ಸವಾಲುಗಳ ಕುರಿತು ಗಮನಸೆಳೆಯುವಂತಿವೆ.

ಈ ‘ತ್ರಿವೇಣಿ ಸಂಗಮ’ ಫ್ಲಾರೆನ್ಸ್ ನೈಟಿಂಗೇಲ್‌ರ ಜನ್ಮದಿನ, ಮೇ 12ರ ‘ಅಂತರರಾಷ್ಟ್ರೀಯ ದಾದಿಯರ ದಿನ’ದ ವಿಶೇಷ.

